58

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ ಸಿಂಹ ನಾಯಕ್.ಕೆ ಇವರ ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.</u>**

**<u>ವಿಷಯ:</u>**

ಕರಾವಳಿ ಮತ್ತು ಮಲೆನಾಡಿಗೆ ಮಾತ್ರ ಸೀಮಿತವಾಗದೆ ಇಡೀ ರಾಜ್ಯಾದ್ಯಂತ ಪ್ರದರ್ಶನಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಯಕ್ಷಗಾನವನ್ನು ಕರ್ನಾಟಕದ ಪ್ರಾತಿನಿಧಿಕ ಕಲೆ ಎಂದು ಪರಿಗಣಿಸಿ, ಮೇಳಗಳು ತಿರುಗಾಟಕ್ಕೆ ಹೊರಡುವ ನವೆಂಬರ್ 12 ರಂದು "ಯಕ್ಷಗಾನ ದಿನ" ವೆಂದು ಘೋಷಿಸಬೇಕೆಂದು ಒತ್ತಾಯಿಸುತ್ತಾ ಬರಲಾಗಿದೆ.

ಯಕ್ಷಗಾನ ಕಲೆಯ ತನ್ನದೇ ಆದ ಮಹತ್ವ, ವೈಶಿಷ್ಟ್ಯತೆ ಹಾಗೂ ಪರಂಪರೆಯನ್ನು ಹೊಂದಿದ್ದು, ಯಕ್ಷಗಾನವನ್ನು ಕರ್ನಾಟಕದ ಪ್ರಾತಿನಿಧಿಕ ಕಲೆ ಎಂದು ಪರಿಗಣಿಸಿ, ಮೇಳಗಳು ತಿರುಗಾಟಕ್ಕೆ ಹೊರಡುವ ನವೆಂಬರ್ 12 ರಂದು "ಯಕ್ಷಗಾನ ದಿನ" ವೆಂದು ಘೋಷಿಸಲು ಇದುವರೆಗೆ ಯಾವುದೇ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**<u>ಉತ್ತರ:</u>**

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 273 ಕರಅ 2007, ದಿನಾಂಕ:19.09.2007ರ ಆದೇಶದಲ್ಲಿ ಜಾನಪದ ಅಕಾಡೆಮಿಯಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯನ್ನು ರಚಿಸಲಾಯಿತು. ನಂತರ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 195 ಕಸಧ 2017 ದಿನಾಂಕ:27.06.2017ರಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕರ್ನಾಟಕ ಬಯಲಾಟ ಅಕಾಡೆಮಿ ಎಂದು ಪ್ರತ್ಯೇಕಿಸಿ 2 ಅಕಾಡೆಮಿಗಳನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ಯಕ್ಷಗಾನ ಅಕಾಡೆಮಿಯು ತನ್ನ ಉದ್ದೇಶಿತ ಕ್ಷೇತ್ರಗಳಲ್ಲಿ ವಿಚಾರ ಸಂಕಿರಣ, ಕಾರ್ಯಾಗಾರ, ಸಂವಾದ, ತಾಳಮದ್ದಲೆ, ಯಕ್ಷಗಾನ ಗೊಂಬೆಯಾಟ, ದಾಖಲೀಕರಣ, ಸಾಕ್ಷ್ಯಚಿತ್ರ, ಯಕ್ಷಗಾನ ತರಬೇತಿ, ಮೂಡಲಪಾಯ ತರಬೇತಿ, ಹಿರಿಯರ ನೆನಪು, ಪುಸ್ತಕ ಪ್ರಕಟಣೆ, ಯಕ್ಷಗಾನ ಶಿಬಿರಗಳು, ಪ್ರಾತ್ಯಕ್ಷಿಕೆ, ಕಮ್ಮಟ, ಹೊರನಾಡು ಕಾರ್ಯಕ್ರಮ ಹಾಗೂ ಮಾಸಾಶನ ಸಂದರ್ಶನ ಇತ್ಯಾದಿ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ಯಕ್ಷಗಾನ ಅಕಾಡೆಮಿಯು ಹಮ್ಮಿಕೊಂಡು ಬರುತ್ತಿದ್ದು ಯಕ್ಷಗಾನ ಕಲೆಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಕಾರ್ಯನಿರ್ವಹಿಸುತ್ತಿದೆ.

.....2

ಅಕಾಡೆಮಿಯಿಂದ 01 ಪಾರ್ತಿಸುಬ್ಬ ಪ್ರಶಸ್ತಿ, 05 ಗೌರವ ಪ್ರಶಸ್ತಿ, 10 ಯಕ್ಷಸಿರಿ ಪ್ರಶಸ್ತಿ, 03 ಪುಸ್ತಕ ಬಹುಮಾನ ಹಾಗೂ ದಿ||ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಇವರ ಹೆಸರಿನಲ್ಲಿ 01 ದತ್ತಿನಿಧಿ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

ಆದರೆ, ಯಕ್ಷಗಾನವನ್ನು ಕರ್ನಾಟಕದ ಪ್ರಾತಿನಿಧಿಕ ಕಲೆ ಎಂದು ಪರಿಗಣಿಸಿ ನವೆಂಬರ್ 12 ರಂದು "ಯಕ್ಷಗಾನ ದಿನ" ವೆಂದು ಘೋಷಿಸುವ ಕುರಿತಂತೆ ಪ್ರಸ್ತಾವನೆ ಬಂದಿರುವುದಿಲ್ಲ.

ಸಂಖ್ಯೆ: ಕಸಂವಾ 67 ಕವಿಸ 2024.

**(ಶಿವರಾಜ ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.